MCC BANK
ESTD : 1912

# Mangalore Catholic Co-operative Bank Ltd

Administrative Office: M.C.C. Bank Building,
Hampankatta, Mangalore-575 001.
Email: hohrd@mccbank.in, Website: www.mccbank.in

## ನೇಮಕಾತಿ ಪ್ರಕಟಣೆ

ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್ ನಿ, ಮಂಗಳೂರು ಇಲ್ಲಿ ಖಾಲಿ ಇರುವ ಈ ಕೆಳಕಂಡ 10 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭದ ದಿನಾಂಕ 26.05.2025ರಿಂದ ದಿನಾಂಕ 09.06.2025ರ ಸಂಜೆ 5.00 ಗಂಟೆಯೊಳಗೆ ಇರುತ್ತದೆ.

ನೇರ ನೇಮಕಾತಿಗೆ ಹೊರಡಿಸಲಾಗಿರುವ ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ಹಿರಿಯ ಸಹಾಯಕ Senior Assistant | 2 |
| 2 | ಕಿರಿಯ ಸಹಾಯಕ Junior Assistant | 8 |
| | ಒಟ್ಟು ಹುದ್ದೆಗಳು Total | 10 |

1. **ವೇತನ ಶ್ರೇಣಿ:**

| ಕ್ರಮ ಸಂಖ್ಯೆ | ಹುದ್ದೆಯ ವಿವರ | ವೇತನ ಶ್ರೇಣಿ |
|---|---|---|
| 1 | ಹಿರಿಯ ಸಹಾಯಕ Senior Assistant | 21600-600-24600-700-28800-800-33600-900-39000-1050-40050 |
| 2 | ಕಿರಿಯ ಸಹಾಯಕ Junior Assistant | 20000-500-21000-600-24600-700-28800-800-33600-900-36300 |

ವೇತನ ಶ್ರೇಣಿಯ ಜೊತೆಗೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ಪ್ರಾವಿಡೆಂಡ್ ಫಂಡ್, ಗ್ರಾಚ್ಯೂಟಿ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುವುದು.

2. **ವಿದ್ಯಾರ್ಹತೆ:**

| ಕ್ರ. ಸಂಖ್ಯೆ | ಹುದ್ದೆಯ ವಿವರ | ನಿಗದಿಪಡಿಸಿದ ವಿದ್ಯಾರ್ಹತೆ |
|---|---|---|
| 1 | ಹಿರಿಯ ಸಹಾಯಕ Senior Assistant | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ ಹೊಂದಿರಬೇಕು (ಬಿಎಸ್ಸಿ/ಬಿಎ/ಬಿಕಾಂ/ಎಂಕಾಂ/ಬಿಇ/ಬಿಬಿಎಮ್/ಬಿಸಿಎ/ಎಮ್‌ಸಿಎ,ಇತ್ಯಾದಿ) <br> ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್‌ನಲ್ಲಿ ಅಗತ್ಯ ಪರಿಣತಿ ಹೊಂದಿರಬೇಕು. <br> **ಅನುಭವ :** ಬ್ಯಾಂಕಿಂಗ್ ವಲಯದಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ. <br> ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು. |
| 2 | ಕಿರಿಯ ಸಹಾಯಕ Junior Assistant | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ ಹೊಂದಿರಬೇಕು (ಬಿಎಸ್ಸಿ/ಬಿಎ/ಬಿಕಾಂ/ಎಂಕಾಂ/ಬಿಇ/ಬಿಬಿಎಮ್/ಬಿಸಿಎ/ಎಮ್‌ಸಿಎ,ಇತ್ಯಾದಿ) ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್‌ನಲ್ಲಿ ಅಗತ್ಯ ಪರಿಣತಿ ಹೊಂದಿರಬೇಕು. |

THE MANGALORE CATHOLIC CO. OP. BANK LTD. R. No. 335 MANGALORE 575 001

3. **ವಯೋಮಿತಿ:**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳನ್ವಯ ಈ ಕೆಳಕಂಡ ಗರಿಷ್ಟ ವಯೋಮಿತಿಗೊಳಪಟ್ಟಿರಬೇಕು.

1. ಅಭ್ಯರ್ಥಿಯು ಯಾವುದೇ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ವರ್ಗ–1ಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ನಲವತ್ತು ವರ್ಷ;
2. ಅಭ್ಯರ್ಥಿಯು ಹಿಂದುಳಿದ ಜಾತಿ ಅಥವಾ ಪಂಗಡಕ್ಕೆ (2ಎ, 2ಬಿ, 3ಎ ಮತ್ತು 3ಬಿ) ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ಮೂವತ್ತೆಂಟು ವರ್ಷ;
3. ಉಳಿದ ಅಭ್ಯರ್ಥಿಯ ಸಂಬಂಧದಲ್ಲಿ(ಸಾಮಾನ್ಯ ವರ್ಗ) – ಮೂವತ್ತೈದು ವರ್ಷ.

ಈ ನಿರ್ಬಂಧವು, ಬ್ಯಾಂಕಿಗೆ ಯಾರ ಸೇವೆಯನ್ನು ಎರವಲು ಪಡೆಯಲಾಗಿದೆಯೋ ಆ ನೌಕರನಿಗೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕವಾದ ನೌಕರನಿಗೆ ಅಥವಾ ಯಾವುದೇ ಸಹಕಾರ ಸಂಘದ ಸೇವೆಯಲ್ಲಿ ಈಗಾಗಲೇ ಇರುವ ವ್ಯಕ್ತಿಯ ವಯಸ್ಸು ಅಂಥ ಸೇವೆಗೆ ಸೇರುವ ಕಾಲದಲ್ಲಿ ಸಂಬಂಧಪಟ್ಟ ಪ್ರದೇಶಕ್ಕೆ ಅನ್ವಯಿಸುವ ಆಗ ಜಾರಿಯಲ್ಲಿದ್ದ ನಿಯಮಗಳಿಗೆ ಅನುಸಾರವಾಗಿದ್ದಲ್ಲಿ, ಅಂಥ ವ್ಯಕ್ತಿಗೆ ಅನ್ವಯಿಸುವುದಿಲ್ಲ.

4. **ಆಯ್ಕೆ ವಿಧಾನ – <u>ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ:</u>**

1) **ಹಿರಿಯ ಸಹಾಯಕ ಹಾಗೂ ಕಿರಿಯ ಸಹಾಯಕ**
(Senior Assistant and Junior Assistant)

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಆಂಗ್ಲ ಭಾಷೆಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗೆ 50 ಅಂಕಗಳು, ಭಾರತ ಸಂವಿಧಾನ ವಿಷಯಕ್ಕೆ 25 ಅಂಕಗಳು ಮತ್ತು ಬ್ಯಾಂಕಿನ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಕ್ಕೆ 25 ಅಂಕಗಳನ್ನು ಒಳಗೊಂಡಿರುತ್ತದೆ.

ಈ ಮೇಲಿನ ಹುದ್ದೆಗಳಿಗೆ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.85ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಜೊತೆಗೆ ಮೌಖಿಕ ಸಂದರ್ಶನಕ್ಕೆ ಗರಿಷ್ಟ 15 ಅಂಕಗಳನ್ನು ನಿಗದಿಪಡಿಸಿದ್ದು, ಸಂದರ್ಶನದಲ್ಲಿ ಗಳಿಸಿದ ಅಂಕಗಳು ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೂಡಿಸಿ ಈ ಆಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

5. **ಅರ್ಜಿ ಶುಲ್ಕ**

(i) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ವರ್ಗ–1ಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ ರೂ.500/–+ ಜಿಎಸ್‌ಟಿ 18% (ರೂಪಾಯಿ ಐನೂರು ಮಾತ್ರ), ಉಳಿದವರ ಸಂದರ್ಭದಲ್ಲಿ ರೂ.1,000/– + ಜಿಎಸ್‌ಟಿ 18% (ರೂಪಾಯಿ ಒಂದು ಸಾವಿರ ಮಾತ್ರ)

(ii) ಅರ್ಜಿ ಶುಲ್ಕವನ್ನು **"ಮಂಗಳೂರು ಕಥೋಲಿಕ್ ಕೊ–ಆಪರೇಟಿವ್ ಬ್ಯಾಂಕ್ ನಿ.,"** ಇವರ ಹೆಸರಿಗೆ ಯಾವುದಾದರೂ ವಾಣಿಜ್ಯ ಬ್ಯಾಂಕು ಅಥವಾ ಸಹಕಾರಿ ಬ್ಯಾಂಕುಗಳಿಂದ ಪಡೆಯಲಾದ ಡಿ.ಡಿ. ಮುಖಾಂತರ ಪಾವತಿಸತಕ್ಕದ್ದು.

6. **ಸೂಚನೆಗಳು ಹಾಗೂ ಅರ್ಹತಾ ಷರತ್ತುಗಳು:**

1) ಅರ್ಜಿಯನ್ನು ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡತಕ್ಕದ್ದು.

2) ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು ಹಾಗೂ ಪತ್ರ ಮುಖೇನ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall Ticket) ವನ್ನು ಬ್ಯಾಂಕಿನ ಆಡಳಿತ ಕಛೇರಿಯಿಂದ

THE MANGALORE CATHOLIC CO. OP. BANK LTD. R. No. 935 MANGALORE 575 001

ಸ್ವೀಕರಿಸುವುದು. ಪ್ರವೇಶ ಪತ್ರವನ್ನು ಲಿಖಿತ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ/ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

2) ನೇಮಕಾತಿ ಆದೇಶ ಹೊರಡಿಸುವ ಪೂರ್ವದಲ್ಲಿ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಇನ್ನಿತರೆ ದಾಖಲಾತಿಗಳ ಜೊತೆಗೆ ಅಭ್ಯರ್ಥಿಗಳು ಸಲ್ಲಿಸುವ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯನ್ನು ಅವುಗಳನ್ನು ವಿತರಿಸಿದ ವಿಶ್ವವಿಧ್ಯಾಲಯಗಳು/ಶೇಕ್ಷಣಿಕ ಪರೀಕ್ಷಾ ಮಂಡಳಿಗಳೊಂದಿಗೆ ಪರಿಶೀಲನೆ ನಡೆಸಲಾಗುವುದು. ಪರಿಶೀಲನೆಯ ನಂತರ ಅಂತಹ ಪ್ರಮಾಣ ಪತ್ರಗಳು ಸಂಬಂಧಿಸಿದ ವಿಶ್ವವಿಧ್ಯಾನಿಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳಿಂದಲೇ ವಿತರಿಸಲಾದ ಪ್ರಮಾಣ ಪತ್ರಗಳೆಂದು ಖಾತ್ರಿಯಾದ ನಂತರವೇ ನೇಮಕಾತಿ ಆದೇಶ ಹೊರಡಿಸಲಾಗುವುದು.

3) ಅಭ್ಯರ್ಥಿಗಳು ಪದವಿಯ ಎಲ್ಲಾ ಸೆಮಿಸ್ಟರ್/ವರ್ಷವಾರುಗಳ ಕ್ರೋಢೀಕೃತ ಅಂಕಗಳ ಶೇಕಡವಾರು ಆಧಾರದ ಮೇಲೆ ಪ್ರತಿಶತ ಪರಿಗಣಿಸಲಾಗುವುದು, ಆದುದರಿಂದ ಸೆಮಿಸ್ಟರ್/ವರ್ಷಗಳ ಎಲ್ಲಾ ಅಂಕಪಟ್ಟಿ ಪ್ರತಿಗಳನ್ನು ಲಗತ್ತಿಸಬೇಕು.

4) ಅಭ್ಯರ್ಥಿಗಳಿಗೆ ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು.

5) ಅಭ್ಯರ್ಥಿಗಳು ಭಾರತೀಯ ನಾಗರೀಕರಾಗಿದ್ದು, ಕರ್ನಾಟಕದಲ್ಲಿ ಕನಿಷ್ಟ 10 ವರ್ಷ ವಾಸವಾಗಿರತಕ್ಕದ್ದು.

6) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನು ಉಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತವಾಗಿರಬೇಕು. ಯೋಗ್ಯ ಹಾಗೂ ಸೂಕ್ತವಾದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ.

7) ಅಪೂರ್ಣವಾಗಿರುವ, ಸಹಿ ಮಾಡದೇ ಇರುವ, ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸದ, ಮೂಲ ಡಿ.ಡಿ ಯನ್ನು ಲಗತ್ತಿಸದ, ಸ್ಪಷ್ಟ ಮಾಹಿತಿಗಳನ್ನು ನೀಡದ, ಸ್ವಯಂ ದೃಢೀಕರಿಸದೇ ಇರುವ ಮತ್ತು ತಪ್ಪು ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ತಿಳುವಳಿಕೆ ನೀಡದೆ ತಿರಸ್ಕರಿಸಲಾಗುವುದು.

**8) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕ–ಪ್ರತ್ಯೇಕ ಅರ್ಜಿ ಸಲ್ಲಿಸಿ, ಪ್ರತ್ಯೇಕವಾಗಿ ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.**

**9) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.**

10) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ನಿಗದಿತ ದಿನಾಂಕ ಮತ್ತು ಸಮಯದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

11) ಕೋಷ್ಟಕದಲ್ಲಿ ನಮೂದಿಸಿರುವ ಅಯಾ ಹುದ್ದೆಗೆ ಸಂಬಂಧಪಟ್ಟ ಸೇವಾ ಅನುಭವದ ದೃಢೀಕರಣ ಪತ್ರವನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

12) ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ ಯಾವುದೇ ಶಾಖೆಯಲ್ಲಿ ಕಾರ್ಯ ನಿರ್ವಹಿಸಲು ಬದ್ಧರಿರತಕ್ಕದ್ದು.

13) ಅಭ್ಯರ್ಥಿಗಳ ಅರ್ಹತೆ ಬಗ್ಗೆ ಬ್ಯಾಂಕಿನ ನೇಮಕಾತಿ ಪ್ರಾಧಿಕಾರದ ನಿರ್ಣಯವೇ ಅಂತಿಮ ಎಂದು ಪರಿಗಣಿಸಲಾಗುವುದು ಇದಕ್ಕೆ ಅಭ್ಯರ್ಥಿ ಬದ್ಧನಾಗಿರಬೇಕು. ಈ ನೇಮಕಾತಿ ಪ್ರಕಟಣೆಯನ್ನು ಕಾರಣಾಂತರಗಳಿಂದಾಗಿ ರದ್ದು ಪಡಿಸುವ ಅಧಿಕಾರವನ್ನು ಬ್ಯಾಂಕಿನ ಆಡಳಿತ ಮಂಡಳಿ ಹೊಂದಿರುತ್ತದೆ.

14) ಆಯ್ಕೆಗೊಂಡ ಅಭ್ಯರ್ಥಿಗಳನ್ನು ಪ್ರಾರಂಭದಲ್ಲಿ ಎರಡು ವರ್ಷಗಳ ಕರಾರು ಪತ್ರದ ಜೊತೆಗೆ ಪರೀಕ್ಷಾರ್ಥ ಅವಧಿಗೆ ನೇಮಕಾತಿ ಮಾಡಲಾಗುವುದು. ಅವಶ್ಯಕವಿದ್ದಲ್ಲಿ ಪರೀಕ್ಷಾರ್ಥ ಅವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಸೇವೆಯನ್ನು ಖಾಯಂಗೊಳಿಸಲಾಗುವುದು ಹಾಗೂ ಅಗತ್ಯ ಸಂದರ್ಭದಲ್ಲಿ ಬ್ಯಾಂಕಿನ ವ್ಯವಹಾರ ಸೇವಾ ಯೋಜನೆಗಳ ಪ್ರಚಾರ ಕಾರ್ಯಗಳಲ್ಲಿ ಭಾಗಿಯಾಗಲು ಬದ್ಧರಿರತಕ್ಕದ್ದು.

THE MANGALORE CATHOLIC CO-OP. BANK LTD.
R. No. 933
MANGALORE
575 001

15) ಅರ್ಜಿ ಸಲ್ಲಿಸಲು ಜಾಹಿರಾತಿನಲ್ಲಿ ಪ್ರಕಟಿಸಿದ ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ವಯೋಮಿತಿ ಮೀರಿರಬಾರದು.

16) ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಥವಾ ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಯಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿ ಹಕ್ಕನ್ನು ಪಡೆದುಕೊಳ್ಳುವುದಿಲ್ಲ. ನೇಮಕಾತಿಯು ಯಾವುದೇ ಹಂತದಲ್ಲಿ ಅನರ್ಹತೆಯ ಕಾರಣದಿಂದಾಗಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸುವ ಅಥವಾ ಇತರ ಆಡಳಿತಾತ್ಮಕ ಕಾರಣಗಳಿಂದಾಗಿ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರವನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ. ಮೇಲಿನ ಯಾವುದೇ ವಿಚಾರಗಳಲ್ಲಿ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

17) ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರವನ್ನು ನೇಮಕಾತಿ ಸಮಿತಿಯು ಹೊಂದಿರುತ್ತದೆ.

**18) ಮುಚ್ಚಿದ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಿರೋ ಆ ಹುದ್ದೆಯ ಹೆಸರನ್ನು ನಮೂದಿಸಿ ಮಹಾಪ್ರಬಂಧಕರು, ಮಂಗಳೂರು ಕಥೋಲಿಕ್ ಕೋಆಪರೇಟಿವ್ ಬ್ಯಾಂಕ್ ನಿ, ಆಡಳಿತ ಕಛೇರಿ, ಎರಡನೇ ಮಹಡಿ, ಹಂಪನಕಟ್ಟ ಮಂಗಳೂರು–575001 ಇಲ್ಲಿಗೆ ಸಲ್ಲಿಸುವುದು.** ಸಾರ್ವತ್ರಿಕ ಬ್ಯಾಂಕ್ ರಜಾ ದಿನಗಳನ್ನು ಹೊರತುಪಡಿಸಿ, ಬ್ಯಾಂಕ್ ವ್ಯವಹಾರದ ಸಮಯದಲ್ಲಿ ಅರ್ಜಿಗಳನ್ನು ಖುದ್ದಾಗಿ ಸ್ವೀಕರಿಸಲಾಗುವುದು.

19) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿದ ಜನ್ಮ ದಿನಾಂಕ, ವಿದ್ಯಾರ್ಹತೆ, ಅನುಭವ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುದಿಲ್ಲ.

**7. ಕಡ್ಡಾಯವಾಗಿ ಲಗತ್ತಿಸಬೇಕಾದ/ಹಾಜರುಪಡಿಸಬೇಕಾದ ದೃಢೀಕರಣ ಪ್ರಮಾಣ ಪತ್ರಗಳು.**

ಅರ್ಜಿಯ ಜೊತೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಪ್ರಮಾಣ ಪತ್ರಗಳ ಪ್ರತಿಗಳನ್ನು ಪ್ರತಿಯೊಂದು ಪುಟಕ್ಕೆ ಸ್ವಹಸ್ತಾಕ್ಷರದಿಂದ (Self Attestation) ದೃಢೀಕರಿಸಿ ಲಗತ್ತಿಸುವುದು.

1) ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಮೂರು ಭಾವ ಚಿತ್ರ (ಭಾವ ಚಿತ್ರದ ಹಿಂಭಾಗದಲ್ಲಿ ಅಭ್ಯರ್ಥಿ ಸಹಿ ಮಾಡಬೇಕು)
2) ಅರ್ಜಿ ಸಲ್ಲಿಸುವ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿದ ವಿಧ್ಯಾರ್ಹತೆಯ ಎಲ್ಲಾ ಸೆಮಿಸ್ಟರ್‌ಗಳ/ವರ್ಷಗಳ ಪ್ರಮಾಣ ಪತ್ರಗಳ ಅಂಕಪಟ್ಟಿ ಪ್ರತಿಗಳು ಮತ್ತು ವಿದ್ಯಾರ್ಹತೆಯ ಪದವಿ ಪ್ರಮಾಣ ಪತ್ರ (ತೀರ ಇತ್ತೀಚಿನ ಪದವಿ ಆದಲ್ಲಿ ಮತ್ತು ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಲ್ಲಿ ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವ ಬಗ್ಗೆ ಅರ್ಜಿ ನಮೂನೆಯಲ್ಲಿ ನಮೂದಿಸತಕ್ಕದ್ದು.)
3) ವಯಸ್ಸಿನ ದೃಢೀಕರಣ ಕುರಿತು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ.
4) ಸೇವಾ ಅನುಭವ ಪ್ರಮಾಣ ಪತ್ರ.
5) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ವರ್ಗ–1, ಹಿಂದುಳಿದ ಜಾತಿ ಅಥವಾ ಪಂಗಡ (2ಎ, 2ಬಿ, 3ಎ ಮತ್ತು 3ಬಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರ.

**ವಿ.ಸೂ.**

ಅ) ಅಭ್ಯರ್ಥಿಗಳು ಅವರ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾ.ಯವಾಗಿ ಇಟ್ಟುಕೊಳ್ಳತಕ್ಕದ್ದು.

ಆ) ಸೇವಾ ಅನುಭವ ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಲ್ಲಿ ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವ ಬಗ್ಗೆ ಅರ್ಜಿ ನಮೂನೆಯಲ್ಲಿ ನಮೂದಿಸತಕ್ಕದ್ದು.

ಇ) ಮೌಖಿಕ ಸಂದರ್ಶನಕ್ಕೆ ಅರ್ಹರಾದಲ್ಲಿ ಮೂಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರುಪಡಿಸುವುದು.

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ

ಸ್ಥಳ : ಮಂಗಳೂರು

ದಿನಾಂಕ : 23.05.2025

THE MANGALORE CATHOLIC CO. OP. BANK LTD. R. No. 935 MANGALORE 575 001

ಮಹಾಪ್ರಬಂಧಕರು